# ದಪ್ಪ ಮೆಣಸಿನಕಾಯಲ್ಲಿ ನವಿಲು

ವಾಹ್! ನವಿಲು ಗರಿಬಿಚ್ಚಿ ನರ್ತಿಸುತ್ತಿದೆ. ಇನ್ನೊಂದು ನವಿಲು ಅದರ ನರ್ತನವನ್ನೇ ಗಮನಿಸುತ್ತಿದೆ. ಆದರೆ ಇದು ತರಕಾರಿಯಲ್ಲಿ ಮಾಡಿದ ಕಲಾಕೃತಿ. ದೊಣ್ಣೆಮೆಣಸು (ದಪ್ಪ ಮೆಣಸಿನಕಾಯಿ)ಗಳನ್ನು ಈ ಕಲಾಕೃತಿಗೆ ಬಳಸಲಾಗಿದೆ.ಇದನ್ನು ನಿರ್ಮಿಸಿದವರು ಸರೋಜಾ ಶಿವಲಿಂಗಪ್ಪ ಬಡಿಗೇರ, ಹುಬ್ಬಳ್ಳಿಯವರು. ಈ ಆಕರ್ಷಕ ಕಲಾಕೃತಿ ದಸರಾ ಫಲಪುಷ್ಪ ಪ್ರದರ್ಶನದಲ್ಲಿ (ಮೈಸೂರಿನ ಕುಪ್ಪಣ್ಣ ಪಾರ್ಕ್) ಕಂಡುಬಂದವು.

**-ಜೆ.ಸಿ.ಗದಾಧರಭಟ್, ಮೈಸೂರು**





# ಆಕರ್ಷಕ ಅಕ್ಕಿಮುಡಿ

ಹಿಂದೆ ಅಕ್ಕಿಯನ್ನು, ಧಾನ್ಯವನ್ನು ಕೆಡದಂತೆ 'ಮುಡಿ'ಯಲ್ಲಿ ಕಟ್ಟಿ ಸಂಗ್ರಹಿಸಿಡುವ ಪದ್ಧತಿ ಇತ್ತು. ಮುಡಿ ಅಂದರೆ 42 ಸೇರು ಅಕ್ಕಿ/ ಧಾನ್ಯ ಅಥವಾ ಒಂದು ಅಳತೆಯ ಪ್ರಮಾಣ. ಮುಡಿಯನ್ನು ಭತ್ತದ ಹುಲ್ಲಿನಿಂದ ಕಟ್ಟಲಾಗುತ್ತದೆ. ಹುಲ್ಲಿನಲ್ಲಿ ಅಕ್ಕಿ ತುಂಬಿಸಿ ಸುತ್ತಲೂ ಕಟ್ಟಲು ಹುಲ್ಲನ್ನು ಹುರಿ ಹಗ್ಗದಂತೆ ನೇಯ್ದು ಕಟ್ಟಲಾಗುತ್ತದೆ. ಮುಡಿ ಕಟ್ಟುವುದೂ ಒಂದು ಕಲೆ. ಹಿಂದಿನ ಕಾಲದಲ್ಲಿ ಮಳೆಗಾಲಕ್ಕೆಂದು ಮುಡಿಯನ್ನು ಸಂಗ್ರಹಿಸಿ ಅಡುಗೆಮನೆಯಲ್ಲಿಡುತ್ತಿದ್ದರು. ನವ ವಧೂವರರ ಗೃಹಪ್ರವೇಶಕ್ಕೆ, ನೂತನ ಮನೆ ಪ್ರವೇಶಕ್ಕೆ, ಶುಭ ಕಾರ್ಯಗಳಿಗೆ ಅಕ್ಕಿ ಮುಡಿಯನ್ನು ಶುಭ ಮುಹೂರ್ತದಲ್ಲಿ ಒಳಗೆ ಕೊಂಡೊಯ್ಯುವ ಶಾಸ್ತ್ರವಿದೆ. ನವ ವಧುವನ್ನು ಅಕ್ಕಿ ಮುಡಿಯ ಮೇಲೆ ಕುಳ್ಳಿರಿಸಿ (ಹೊಸ್ತಿಲ ಬಳಿ) ಹೊಸ ಹೆಸರಿಡುವ ಸಂಪ್ರದಾಯ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈಗಲೂ ಕೆಲವರಲ್ಲಿದೆ. ಮುಡಿಯಲ್ಲಿರುವ ಅಕ್ಕಿಯ ಗುಣಮಟ್ಟ ನೋಡಲು ಮುರ್ನಾಳಿ ಎಂಬ ಚಿಕ್ಕ ಹಿಡಿಕೆಯುಳ್ಳ ವಸ್ತು ಉಪಯೋಗಿಸುವರು.

**-ಎಸ್.ಜಯಶ್ರೀ ಶೈಣೈ, ಮಂಗಳೂರು**

# ಸಕ್ಕರೆಪುಡಿಯಿಂದ ಕಳಸದ ತಟ್ಟೆ

ಮದುವೆಯ ಸಂದರ್ಭದಲ್ಲಿ ವರೋಪಚಾರಕ್ಕಾಗಿ ಜೋಡಿಸಿಟ್ಟ ಈ ಆಕರ್ಷಕ ಕಲಾಕೃತಿಗಳನ್ನು ಸಕ್ಕರೆಪುಡಿ, ಫೆವಿಕಾಲ್ ಮತ್ತು ಬಣ್ಣಗಳನ್ನು ಬಳಸಿ ಮಾಡಲಾಗಿದೆ. ಅರಶಿಣ– ಕುಂಕುಮ ಬಟ್ಟಲು, ಕಳಸದ ತಟ್ಟೆ, ದೀಪಗಳು, ತುಳಸೀಕಟ್ಟೆ ಮುಂತಾದವುಗಳನ್ನು ಅತ್ಯಂತ ನಾಜೂಕಾಗಿ, ಆಕರ್ಷಣೆಯವಾಗಿ ಮಾಡಲಾಗಿದ್ದು, ಗೆಳತಿಯ ಮಗನ ಮದುವೆಯಲ್ಲಿ ಎಲ್ಲರ ಗಮನವನ್ನು ಸೆಳೆದವು.

**-ಶೋಭಾ ಅರವಿಂದ್, ಶಿವಮೊಗ್ಗ**

